ಕರ್ನಾಟಕ ವಿಧಾನ ಸಭೆ

**132 ಡಾ: ಶರಣ ಪ್ರಕಾಶ ರುದ್ರಪ್ಪ (ಪಾಟೀಲ್ (ಸೇಡಂ)**

**ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸರಬರಾಜು ಸಚಿವರು**

ಅ) ಸೇಡಂ ಪಟ್ಟಣದಲ್ಲಿ ಕಾರಾಗೃಹದ ಹೊಸ ಕಟ್ಟಡ ಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕಾರಾಗೃಹ ಇಲಾಖೆಯಿಂದ ಸೇಡಂ ಪಟ್ಟಣದಲ್ಲಿ ಕಾರಾಗೃಹದ ಹೊಸ ಕಟ್ಟಡ ಕಟ್ಟಿರುವುದಿಲ್ಲ. ಕಂದಾಯ ಇಲಾಖೆಯ ವಶದಲ್ಲಿರುವ ಹಳೇ ಕಾರಾಗೃಹದ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯಿಂದ ದುರಸ್ಥಿಗೊಳಿಸಲಾಗಿದೆ. ಪ್ರಸ್ತುತ ಈ ಉಪ ಕಾರಾಗೃಹವು ಕಾರಾಗೃಹಗಳ ಇಲಾಖೆಯ ವಶದಲ್ಲಿ ಇರುವುದಿಲ್ಲ.

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು?

ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ:ಹೆಚ್‌ಡಿ 53 ಪಿಆರ್‌ಎ 2009

ಸಹಿ/-

(ಉಮೇಶ್ ವಿ. ಕತ್ತಿ)

ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

(ಟಿ. ಕೃಷ್ಣಮೂರ್ತಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಸೆರಮನೆ ಮತ್ತು ಸಿನಿಮಾ)

ಕರ್ನಾಟಕ ವಿಧಾನ ಸಭೆ

**208 ಶ್ರೀ ಎಂ.ಸತ್ಯನಾರಾಯಣ**

ಅ) ಮೈಸೂರು ನಗರದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆ ಎಷ್ಟು? ವಿವರ ನೀಡುವುದು.

ಮೈಸೂರು ನಗರದಲ್ಲಿ ಒಟ್ಟು 162 ಗೃಹ ನಿರ್ಮಾಣ ಸಹಕಾರ ಸಂಘಗಳಿದ್ದು, ಈ ಪೈಕಿ 140 ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, 01 ಸಹಕಾರ ಸಂಘ ಸ್ಥಗಿತಗೊಂಡಿದ್ದು, 21 ಸಹಕಾರ ಸಂಘಗಳು ಸಮಾಪನೆಗೊಂಡಿರುತ್ತವೆ.

ಆ) ಬೆಂಗಳೂರಿನಲ್ಲಿ ಸಂಘದ ಕೇಂದ್ರ ಕಛೇರಿ ಹೊಂದಿದ್ದು, ಮೈಸೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಗೃಹ ನಿರ್ಮಾಣ ಸಹಕಾರ ಸಂಘಗಳೆಷ್ಟು? ವಿವರ ನೀಡುವುದು.

ಬೆಂಗಳೂರಿನಲ್ಲಿ ಸಂಘದ ಕೇಂದ್ರ ಕಛೇರಿ ಹೊಂದಿದ್ದು, ಮೈಸೂರು ಜಿಲ್ಲೆಯಲ್ಲೂ ಕಾರ್ಯವ್ಯಾಪ್ತಿ ಹೊಂದಿರುವ ಒಟ್ಟು 28 ಗೃಹ ನಿರ್ಮಾಣ ಸಹಕಾರ